ಎನ್ನತಕ್ಕಂಥ ವಿಚಾರವನ್ನು ನೆನ್ನೆ ತೆಗೆದುಕೊಂಡಿದ್ದುದು. ಅವರು ಉತ್ತರವನ್ನು ಕೊಡಲಿಲ್ಲ. ನೆನ್ನೆ ತಾವೇ 11.00 ಗಂಟೆಗೆ ಸದನವನ್ನು ಮುಂದಕ್ಕೆ ಹಾಕುತ್ತೇನೆಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಆ ಒಂದು ಸಭೆಗೆ ನಮ್ಮಿಬ್ಬರು ಮಾನ್ಯ ಸ್ನೇಹಿತರುಗಳಾದ ಮಾಧು ಸ್ವಾಮಿ ಮತ್ತು ಶ್ರೀರಾಮ ರೆಡ್ಡಿಯವರು ಭಾಗಿಯಾಗಿದ್ದಾರೆ. ಒಳಗಡೆ ಗಂಭೀರವಾಗಿದ್ದು, ಒಪ್ಪಿಕೊಂಡು ಇಲ್ಲಿ ಇವರಿಬ್ಬರು ಪಿತೂರಿ ನಡೆಸುತ್ತಿದ್ದಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ: ಯಾರಾದರೂ ಶಾಸನ ಸಭೆಯಲ್ಲಿ subhect move ಮಾಡುವವರನ್ನು ಮಾತನಾಡಿಸಿದರೆ ಅದನ್ನು ಪಿತೂರಿ ಎಂದರೆ subject move ಮಾಡುವುದು ಏಕೆ ಎಂದುಹೇಳಬೇಕು. ಈ ನಿಲುವಳಿಯನ್ನು ಅಥವಾ ಈ ನಿರ್ಣಯವನ್ನು ತಂದವರನ್ನು ದಯಮಾಡಿ ಮಾತನಾಡಿಸಿ. ಇದರ ಬಗ್ಗೆ ಒಂದು ಇತ್ಯರ್ಥ ಆಗಲಿ ಎಂದು ಹೇಳುವುದನ್ನು ಬಿಟ್ಟರೆ ಏನು ಪಿತೂರಿ ನಮ್ಮಿಂದ ನಡೆಯುತ್ತಿದೆ ಎಂಬ ಬಗ್ಗೆ ಅವರು ಈಗ ಹೇಳಬೇಕು. ಈ ವಿಷಯ ಮಂಡಿಸಿದ್ದೇ ಪಿತೂರಿಯೇ ಎಂದು ಹೇಳಬೇಕು.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಅವರು ವಿಷಯಕ್ಕೆ ಬರುತ್ತಿಲ್ಲ. ಆದುದರಿಂದ ನಾನು ಇದನ್ನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮ ರೆಡ್ಡಿಯವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ಈಗ ನಿಮ್ಮ ವಿಚಾರ ಏನಿದೆ ಎಂಬುದು ನಮಗೆ ಗೊತ್ತಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ವಿಚಾರ. ಆ ಗಾಂಭೀರ್ಯತೆಯನ್ನು ತಾವು ತೆಗೆದುಕೊಳ್ಳುತ್ತಿಲ್ಲ. ಬೇರೆ ವಿಷಯಕ್ಕೆ ಹೋಗದೇ ದಯವಿಟ್ಟು ಈ ವಿಷಯಕ್ಕೆ ಬನ್ನಿ ಮಾತನಾಡಿ.